ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಭೋಧಕ ಮತ್ತು ಭೋಧಕೇತರ ವರ್ಗಗಳ ನೇಮಕಾತಿಯ ನಿಯಮ

೯೯೧. ಶ್ರೀ ಎ. ಕೃಷ್ಣಪ್ಪ (ವರ್ತೂರು).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀಯ ವೈದ್ಯ ಪದ್ಧತಿಗಳ ಇಲಾಖೆಗಳಲ್ಲಿ ಭೋದಕ ಮತ್ತು ಬೋದಕೇತರ ವರ್ಗಗಳ ದರ್ಜೆ ಮತ್ತು ನೇಮಕಾತಿ ನಿಯಮಾವಳಿಗಳು ಜಾರಿಗೆ ಬಂದುದು ಎಂದಿನಿಂದ, ಹಾಗೂ ಅವುಗಳ ಪ್ರಕಾರ ಉಪನ್ಯಾಸಕರ ಹಾಗೂ ಚಿಕಿತ್ಸಕ ದರ್ಜೆ–೩ ಇವುಗಳ ಗರಿಷ್ಠ ವಯೋಮಿತಿ ಎಷ್ಟು?

ಆ) ೧೯೭೩–೭೪ರಲ್ಲಿ ಭಾರತೀಯ ವೈದ್ಯ ಪದ್ಧತಿಗಳ ಇಲಾಖೆಗೆ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಚಿಕಿತ್ಸಕರ ದರ್ಜೆ–೩ ಇವರುಗಳ ಆಯ್ಕೆಗಾಗಿ ನಿಗದಿಗೊಂಡ ಗರಿಷ್ಠ ವಯೋಮಿತಿ ಎಷ್ಟು? ಹಾಗೂ ಆಗ ಈ ಇಲಾಖೆಯ ದರ್ಜೆಯ ಮತ್ತು ನೇಮಕಾತಿ ನಿಯಮಾವಳಿಗಳು ಜಾರಿಯಲ್ಲಿತ್ತೆ?

ಇ) ಭಾರತೀಯ ವೈದ್ಯ ಪದ್ಧತಿಗಳ ಇಲಾಖೆಗೆ ಉಪನ್ಯಾಸಕರ ಹುದ್ದೆಗಾಗಿ ೧೯೬೯ ಮತ್ತು ೧೯೭೨ರಲ್ಲಿ ಸ್ಥಳೀಯ ಅಭ್ಯರ್ಥಿಯಾಗಿ ಆಯ್ಕೆಗೊಂಡ ನಂತರ ಖಾಯಂಗೊಳಿಸಲ್ಪಟ್ಟ ೫ ಜನ ಅಭ್ಯರ್ಥಿಗಳನ್ನು ಖಾಯಂಗೊಳಿಸುವಾಗ ಪರಿಗಣಿಸಲ್ಪಟ್ಟ ಗರಿಷ್ಠ ವಯೋಮಿತಿ ಎಷ್ಟು?

ಈ) ಭಾರತೀಯ ವೈದ್ಯ ಪದ್ಧತಿಗಳ ಇಲಾಖೆಯಲ್ಲಿ ಈಗ ಖಾಯಂಗೊಳ್ಳದೇ ತಡೆಯುಳ್ಪಟ್ಟಿರುವ ಸುಮಾರು ೨೬ ಜನ ಸ್ಥಳೀಯ ಅಭ್ಯರ್ಥಿ ಚಿಕಿತ್ಸಕರ ಖಾಯಂಮಾತಿ ತಡೆಗೆ ಉಂಟಾಗಿರುವ ಕಾರಣ ಏನು, ಇವರನ್ನು ಯಾವಾಗ ಖಾಯಂಗೊಳಿಸಲಾಗುತ್ತದೆ ಹಾಗೂ ಇವರಿಗೆ ಪೂರ್ವಾನ್ವಯದ ಮೇರೆಗೆ ಖಾಯಂಮಾತಿ ಸಿಗುತ್ತದೆಯೇ?

ಶ್ರೀ ಬಿ. ರಾಚಯ್ಯ.—(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)

ಅ) ದರ್ಜೆ ಮತ್ತು ನೇಮಕಾತಿ ನಿಯಮಗಳು ಜಾರಿಗೆ ಬಂದದ್ದು:

ಭೋದಕ ವರ್ಗ —೧೯೭೧ರಲ್ಲಿ

ಭೋದಕೇತರ ವರ್ಗ—೧೯೭೦ರಲ್ಲಿ

ಭೋದಕೇತರ ವರ್ಗ—
(ಪರಿಷ್ಕೃತ) ೧೯೮೫ರಲ್ಲಿ

ಆ) ಗರಿಷ್ಠ ವಯೋಮಿತಿ:

ಉಪನ್ಯಾಸಕರು ೩೫ ವರ್ಷಗಳು

ಚಿಕಿತ್ಸಕ ದರ್ಜೆ—೩ ೧೯೭೦ರ ನಿಯಮಗಳಲ್ಲಿ ಇಲ್ಲ.
೧೯೮೫ರ ನಿಯಮ ೩೫ ವರ್ಷಗಳು.

೧) ಗರಿಷ್ಠ ವಯೋಮಿತಿ ೩೫ ವರ್ಷಗಳು

೨) ೧೯೭೦ರ ವರ್ಗ ಮತ್ತು ನೇಮಕಾತಿ ನಿಯಮಗಳು ಜಾರಿಯಲ್ಲಿದ್ದವು.

ಇ) ಆ ಹುದ್ದೆಗಳಿಗೆ ನೇಮಕಾತಿ ನಿಯಮಗಳು ಇರಲಿಲ್ಲವಾದ್ದರಿಂದ ಅವರುಗಳ ಸೇವೆಯನ್ನು ಕ್ರಮಬದ್ಧಗೊಳಿಸುವಾಗ ವಯೋಮಿತಿಯನ್ನು ಪರಿಗಣಿಸಿರುವುದಿಲ್ಲ.

ಈ) ನೇಮಕಗೊಳಿಸುವಾಗ ಸಾಮಾನ್ಯ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿದ ಗರಿಷ್ಠ ವಯೋಮಿತಿಯನ್ನು ಮೀರಿರುವುದರಿಂದ ಅವರುಗಳ ಸೇವೆಯನ್ನು ಕ್ರಮಬದ್ಧಗೊಳಿಸಲಾಗಿರುವುದಿಲ್ಲ. ನಿಯಮಗಳನ್ನು ಸಡಿಲಗೊಳಿಸದ ಹೊರತು ಇವರ ಸೇವೆಯನ್ನು ಖಾಯಂಗೊಳಿಸುವುದು ಸಾಧ್ಯವಾಗುವುದಿಲ್ಲ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಪೋಲೀಸ್ ಗೋಲಿಬಾರ್‌ನಿಂದ ಆದ ಅನಾಹುತಗಳ ಸಂಖ್ಯೆ

೯೮೫. ಶ್ರೀ ಆರ್ ಎನ್. ನಾಯ್ಕ (ಭಟ್ಕಳ).— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫ರ ಜನವರಿಯಿಂದ ೧೯೮೮ರ ಜನವರಿಯ ವರೆಗೆ ಎಷ್ಟು ಕಡೆ ಪೋಲೀಸರು ರಾಜ್ಯದಲ್ಲಿ ಗೋಲೀಬಾರ್ ನಡೆಸಿದ್ದಾರೆ.

ಆ) ಎಲ್ಲೆಲ್ಲಿ ಎಷ್ಟೆಷ್ಟು ಜನರು ಸತ್ತಿದ್ದಾರೆ

ಇ) ಎಲ್ಲೆಲ್ಲಿ ಎಷ್ಟು ಸುತ್ತು ಗುಂಡು ಹಾಗೂ ರಬ್ಬರ್ ಗುಂಡು ಹಾರಿಸಲಾಯಿತು.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಗೃಹ ಸಚಿವರು).—

ಅ) ೧. ೧೯೮೫ ೧೭
೨. ೧೯೮೬ ೩೧
೩. ೧೯೮೭ ೩೩
೪. ೧೯೮೮ ೨

ಒಟ್ಟು ೮೩

ಆ)

ವರ್ಷ		ಸ್ಥಳ ಮತ್ತು ದಿನಾಂಕ	ಸತ್ತವರ ಸಂಖ್ಯೆ
೧೯೮೫	೧.	ಬಾಗಲಕೋಟೆ (ವಿಜಾಪುರ ಜಿಲ್ಲೆ) ದಿನಾಂಕ ೧-೧-೧೯೮೫	೧
	೨.	ಹೊನ್ನಾಳಿ ಟೌನ್ ಬಸ್ ಸ್ಟಾಂಡ್ (ಶಿವಮೊಗ್ಗ ಜಿಲ್ಲೆ) ೬-೩-೧೯೮೫	೨
	೩.	ಪೀಲ್ ಯಾರ್ಡ್, ಚನ್ನಸಂದ್ರ (ಬೆಂಗಳೂರು ನಗರ) ೧೯:೨೦-೭-೧೯೮೫	
		ಒಟ್ಟು	೪
೧೯೮೬	೧.	ಚೆನ್ನಪಟ್ಟಣ ಟೌನ್ (ಬೆಂಗಳೂರು ಜಿಲ್ಲೆ) ೧೯-೧-೧೯೮೬	೨
	೨.	ಬ್ಯಾಲಾಲ್ ಹಳ್ಳಿ (ಧಾರವಾಡ ಜಿಲ್ಲೆ) ೨೬-೧-೧೯೮೬	೧
	೩.	ಹಿಂಡಲಗ (ಬೆಳಗಾವಿ ಜಿಲ್ಲೆ) ೧-೬-೧೯೮೬	೩
		ಒಟ್ಟು	೬